ಒಂದಾಣೆ ಮಾಲೆ 283

# ನವಜೀವನ

(ಸಾಮಾಜಿಕ ಏಕಾಂಕ)

❋

ರಚಯಿತರು:

ಶ್ರೀ। ಎಸ್. ತಿರುಮಲೇಶ್ವರ ಭಟ್ಟ,
ಶಿರೋಮಣಿ, ವಿದ್ವಾನ್, ಮಂಗಳೂರು.

❋

1960

ಬೆಲೆ: ೧ ಆಣೆ.

ಒಂದಾಣೆ ಮಾಲೆ — ಮಂಗಳೂರು.

# ನವಜೀವನ

## [ಸಾಮಾಜಿಕ ಏಕಾಂಕ]

---

### ಪಾತ್ರಗಳು:

**ರಂಗಣ್ಣ**—ಯಜಮಾನ. 40ರ ಗಡಿದಾಟಿದವನು.
**ರಾಮು**—ರಂಗಣ್ಣನ ಮಗ. ವಿದ್ಯಾವಂತ, ಎಳೆಯ ತರುಣ.
**ಕರುಣಾಕರ**—ರಾಮುವಿನ ಸ್ನೇಹಿತ.
**ಕಿಶೋರ**, **ಶ್ರೀಕಂಠ**, **ಸುಕುಮಾರ**—ರಾಮುವಿನ ತಮ್ಮಂದಿರು. ವಿದ್ಯಾರ್ಥಿಗಳು.
**ಪದ್ಮಾವತಿ**—ರಂಗಣ್ಣನ ಮಡದಿ. 35 ವರ್ಷದವಳು.
**ಗಂಗಜ್ಜಿ**—ರಂಗಣ್ಣನ ತಾಯಿ. ಮಡಿವಂತಿಕೆಯ ಮುದುಕಿ.
**ಶಾಮತಂತ್ರಿಗಳು**—ಹಳ್ಳಿಯ ಮಂತ್ರವಾದಿ.
**ಡಾ| ರಮೇಶ**—ಗ್ರಾಮಚಿಕಿತ್ಸಾಲಯದ ಡಾಕ್ಟರ್.

### ದೃಶ್ಯ ೧

(ಪ್ರಾತಃಕಾಲದ ಸಮಯ. ರಂಗಣ್ಣನ ಮನೆಯ ಹೊರಚಾವಡಿಯಲ್ಲಿ ರಾಮು ತನ್ನ ತಮ್ಮಂದಿರನ್ನು ಸೂರ್ಯನಮಸ್ಕಾರ ಮಾಡಿಸುತ್ತಿರುವನು.)

ರಾಮು: ಮಿತ್ರಾಯ ನಮಃ

ಇತರರು: (ಏಕಕಂಠದಿಂದ) ಮಿತ್ರಾಯ ನಮಃ.

ರಾಮು: ಸೂರ್ಯಾಯ ನಮಃ.

ಇತರರು: (ಒಟ್ಟಿಗೆ) ಸೂರ್ಯಾಯ ನಮಃ.

ರಾಮು: ರವಯೇ ನಮಃ.

ಇತರರು: (ಏಕಕಂಠದಿಂದ) ರವಯೇ ನಮಃ.

ರಾಮು: ಭಾಸ್ಕರಾಯ ನಮಃ.

ಇತರರು: (ಒಟ್ಟಿಗೆ) ಭಾಸ್ಕರಾಯ ನಮಃ.

(ಸೂರ್ಯನಮಸ್ಕಾರ ಮುಗಿಸಿ ಶೀರ್ಷಾಸನವಮಾಡುವರು. ಅಷ್ಟರಲ್ಲಿ ಗಂಗಜ್ಜಿಯು ಪ್ರವೇಶ.)

ಗಂಗಜ್ಜಿ: ನಾರಾಯಣ, ನಾರಾಯಣ, ಗೋವಿಂದ (ಎನ್ನುತ್ತ ಪ್ರವೇಶಿಸಿ) ಏನಪ್ಪ ಕಲಿಕಾಲ! ಬೆಳಗ್ಗೆ ಎದ್ದು ಮೋರೆತೊಳೆದು, ವಿಭೂತಿ ಹಚ್ಚಿ, ನಾರಾಯಣ, ನಾರಾಯಣ ಎಂದು ಹರಿಸ್ಮರಣೆ ಮಾಡದೆ ತಲೆಕೆಳಗೆ ಕಾಲು ಮೇಲೆ ಮಾಡಿ ಲಾಗಹೊಡೆಯುವರಲ್ಲ ಈ ಮಕ್ಕಳು! (ಪ್ರಕಾಶ) ಎಲಾ ರಾಮು, ಕಿಶೊ, ಶಿಕ್ಕೊ, ಸುಕ್ಕೊ ಏನೋ ಇದು? ಬೆಳಗ್ಗೆ ಎದ್ದು ಮೋರೆ ತೊಳೆದು ನಾರಾಯಣ ನಾರಾಯಣ ಎನ್ನುವುದು ಬಿಟ್ಟು, ಮಂಗಗಳಂತೆ ಲಾಗಹೊಡೆಯುತ್ತೀರಾ? ಡೊಂಬರಾಟದವರೊ ನೀವು?

ರಾಮು: ಅಜ್ಜಿ, ಇದು ಲಾಗವಲ್ಲ, ಡೊಂಬರಾಟವೂ ಅಲ್ಲ. ಸೂರ್ಯನಮಸ್ಕಾರ. ಇದು ಒಂದು ವಿಧದ ವ್ಯಾಯಾಮ. ಆರೋಗ್ಯದಿಂದ ದೃಢಕಾಯರಾಗಿ ಬಾಳಲು ವ್ಯಾಯಾಮ ಅಗತ್ಯ ಅಜ್ಜಿ!

ಗಂಗಜ್ಜಿ: ಎಂಥ ವ್ಯಾಯಾಮವೊ ನಿಮ್ಮದು? ನಿಮ್ಮ ಅಪ್ಪ, ಅಜ್ಜ ಎಲ್ಲ ವ್ಯಾಯಾಮಮಾಡಿಯೇ ಬದುಕಿದ್ದು ಅಂತ ಕಾಣುತ್ತದೆ! ನಿನ್ನ ಅಜ್ಜ ಒಂದು ತಲೆನೋವು ಕೂಡ ಕಾಣದೆ 85 ವರ್ಷ ಬದುಕಿದ್ದರು ನೋಡು. ರಾಮು, ನೀನು ಹಾಳಾದುದು ಸಾಲದುದಕ್ಕೆ ಈ ನಿನ್ನ ತಮ್ಮಂದಿರನ್ನೂ ಹಾಳುಮಾಡುವೆಯಾ?

ರಾಮು: ಅಜ್ಜಿ, ನಿಮಗೆ ಹಿಂದಿನವರಂತೆಯೇ ಇಂದಿನವರೂ ಇರಬೇಕೆಂದು ತೋರಿದರೆ, ಅದು ಸರಿಯಾಗದು. ಕಾಲವೇ ಬದಲಾದಾಗ ಎಲ್ಲವೂ ಬದಲಾಗಬೇಕಜ್ಜಿ! (ಮೊದಲಿನಂತೆಯೇ ಸೂರ್ಯನಮಸ್ಕಾರ ಮಾಡಿಸುವನು.)

ಗಂಗಜ್ಜಿ: ಹೇಳಿದರೆ ಕೇಳಲಿಕ್ಕಿಲ್ಲ. ಈಗಿನ ಮಕ್ಕಳೇ ಹೀಗೆ. ಕಣ್ಣಿಗೆ ಕಂಡುದನ್ನು ಬಾಯಿಂದ ಹೇಳದೆ ಮನಸ್ಸು ಕೇಳುವುದಿಲ್ಲ.

ಮಕ್ಕಳು: ಹೌದಜ್ಜಿ. ನಿಮ್ಮಂಥ ಪೂರ್ವಕಾಲದ ಪು[illegible]ಜ್ಜಿಯರ ಅಂಧಾಚಾರವೇ ಇಂದಿನ ಮಂದಿಯ ಅವನತಿಗೆ ಕಾರಣ. 'ಅಜ್ಜಿ ಸಾಕಿದ ಮಗು ಬೊಜ್ಜ ತಿನ್ನಲಿಕ್ಕೂ ಆಗದು' ಎಂಬ ಗಾದೆಯೇ ಇದೆ[illegible]ಲ್ಲ

ರಂಗಜ್ಜಿ: ಅಯ್ಯಪ್ಪ! ಏನು ಬೇಕಾದರೂ ಮಾಡಿ [illegible] ನಿಮ್ಮ ಬಾಯಿಯಲ್ಲಿ ಮಾತಾಡಲು ಸಾಧ್ಯವಿಲ್ಲ. ನಿಮ್ಮ ತಂದೆ ಈಗ ಮೋರೆ

ತೊಳೆದುಕೊಂಡು ಬರುವಾಗ ಲಾಗಹೊಡೆಯುತ್ತಿರಿ, ಆಗ ಏನಾಗುವುದೆಂದು ಮತ್ತೆ ಗೊತ್ತಾಗುವುದು.

ರಾಮು: (ತಮ್ಮಂದಿರನ್ನು ಕುರಿತು) ನೋಡಿ, ಇಂದು ನವಂಬರ್ ತಾರೀಕು 14, ನಮ್ಮ ಪ್ರಧಾನ ಮಂತ್ರಿ ಜವಾಹರಲಾಲರ ಹುಟ್ಟುಹಬ್ಬದ ದಿನವಲ್ಲವೆ? ಈ ದಿನ "ಮಕ್ಕಳದಿನ"ದ ಆಚರಣೆಗಾಗಿ ನೀವು ಸಿದ್ಧರಾಗಿರಿ. ನನಗೂ ಒಂದು ಕಡೆಗೆ ಹೋಗಲಿದೆ. (ಎಲ್ಲರೂ ತೆರಳುವರು.)

ರಂಗಜ್ಜಿ: ನಾರಾಯಣ, ನಾರಾಯಣ! (ಸೊಸೆಯನ್ನು ಕರೆಯುವಳು. ಪದ್ದೂ, ಏ ಪದ್ದೂ!

ಪದ್ಮಾವತಿ: (ಪ್ರವೇಶಿಸಿ) ಕರೆದಿರಾ ಅತ್ತೆಮ್ಮಾ!

ಗಂಗಜ್ಜಿ: ಹೌದು, ಕರೆದೆ. ಎನುವಿಗೆ ಜ್ವರ ಹೇಗಿದೆಯೋ? ನಿನ್ನೆ ಶಾಮುತಂತ್ರಿಗಳ ಭಸ್ಮ ತಂದುಹಾಕಿದರಿಂದ ಸ್ವಲ್ಪ ಕಡಿಮೆಯಿರಬೇಕು, ಅಲ್ಲವೆ? ಭಸ್ಮ ತರಬೇಕಾದರೆ ರಂಗಣ್ಣನಿಗೆ ದಮ್ಮಯ್ಯ ಹಾಕಿ, ಕಾಲು ಮಾತ್ರ ಹಿಡಿಯಲಿಲ್ಲ.

ಪದ್ಮಾವತಿ: ಜ್ವರ ಕಡಿಮೆಯೂ ಇಲ್ಲ. ಮುಣ್ಣೂ ಇಲ್ಲ. ಮೈ ಕೆಂಡದಂತೆ ಕಾಯುತ್ತದೆ. ಇಂದಾದರೂ ಆಸ್ಪತ್ರೆಯಿಂದ ಮದ್ದು ತಂದರೆ ಆಗುತ್ತಿತ್ತು. ಭಸ್ಮ, ಕುರುಜಿ, ಮಂತ್ರವಾದ ಎಂದು, ದಿನ ಕೆಲವಾಯಿತು. ಏನೂ ಗುಣವಿಲ್ಲ.

ಗಂಗಜ್ಜಿ: ನಿಮಗೆಲ್ಲ ಹಾಗೆಯೇ. ಭಸ್ಮದಲ್ಲಿ ವಿಶ್ವಾಸವಿಲ್ಲ. ದೇವರಲ್ಲಿ ನಂಬಿಕೆಯಿಲ್ಲ. ಶಾಮುತಂತ್ರಿಗಳ ಭಸ್ಮದಿಂದ, ಮಂತ್ರವಾದದಿಂದ ಗುಣವಾಗದ ರೋಗವಿಲ್ಲ.

ಪದ್ಮಾವತಿ: ಹಾಗಿದ್ದರೆ ಜ್ವರ ಯಾಕೆ ಕಡಿಮೆಯಾಗಿಲ್ಲ?

ಗಂಗಜ್ಜಿ: ನಿಮಗೆ ವಿಶ್ವಾಸವಿಲ್ಲದೆ ಹಾಗಾದ್ದು. ಎಲ್ಲದಕ್ಕೂ ವಿಶ್ವಾಸ ಬೇಕು. "ವಿಶ್ವಾಸಃ ಫಲದಾಯಕಃ." ನೋಡು ಪದ್ದೂ, ನಮ್ಮ ರಂಗಣ್ಣನಿಗೆ ಒಮ್ಮೆ—ನಿನ್ನ ಮದುವೆಯಾಗುವ ಮೊದಲು— ಬೆಂಕಿಯಂತೆ ಜ್ವರ ಬರುತ್ತಿತ್ತು. ಶಾಮುತಂತ್ರಿಗಳ ಭಸ್ಮ ತಂದು ಕುರುದಿಯಲ್ಲಿ ಕಲಸಿ ಹೊಟ್ಟೆಗೆ ಕೊಟ್ಟದ್ದು, ಮೈಗೆಲ್ಲ ಸಂದು ಸಂದು ಹಾಕಿದ್ದು. ಅಂದೇ ಜ್ವರ ಗುಣ. ನಿಮಗೆಲ್ಲ ಹೂ........ಅಂದರೆ ದಾಕ್ಟ್ರಪ್ಪ, ಆಸ್ಪತ್ರೆ! ನಾರಾಯಣ, ನಾರಾಯಣ!

ರಂಗಣ್ಣ: (ಪ್ರವೇಶಿಸಿ) ಪದ್ಮಾ! ಮಗುವಿಗೆ ಹೇಗಿದೆ?

ಪದ್ಮಾವತಿ: ಹೇಗಿರುವುದು? ಅನ್ನ ಹೋಗಿ ಗಂಜಿ ಆಗಿದೆ. ಮಲಗಿದ ಮಗು ಏಳುವುದೇ ಇಲ್ಲ. ಈವೊತ್ತಾದರೂ ಆಸ್ಪತ್ರೆಗೆ ಹೋಗಿ ಡಾಕ್ಟ್ರ ಔಷಧಿ ತನ್ನಿ.

ಗಂಗಜ್ಜಿ: ರಂಗಣ್ಣಾ, ಇವಳಿಗೆ ಹುಚ್ಚೆಂದು ನಿನಗೂ ಹುಚ್ಚೋ? ನೀನು ಹೋಗಿ ಆ ಶಾಮ ತಂತ್ರಿಗಳನ್ನು ಕರೆದುಕೊಂಡು ಬಾ. ಅವರು ಒಂದು ಬಲಿ ತೆಗಿಲಿ. ಮಗುವಿಗೆ ಏನೋ ಹೆದರಿದಂತಾಗಿರಬೇಕು. ಮತ್ತೇನಿಲ್ಲ.

ರಂಗಣ್ಣ: ಇರಬಹುದಮ್ಮಾ, ಒಮ್ಮೊಮ್ಮೆ ಅಳುಕಿದಂತಾಗುತ್ತದೆ. ನನಗೂ ಅದೇ ಸಂಶಯ. ಆಗಲಿ, ತಂತ್ರಿಗಳಲ್ಲಿಗೆ ಹೋಗಿ ಬರುತ್ತೇನೆ. (ತೆರಳುವನು.)

ಗಂಗಜ್ಜಿ: ನಾರಾಯಣ, ನಾರಾಯಣ, ಗೋವಿಂದ! ಈವೊತ್ತು ಏಳುವಾಗಲೇ ಈ ಹಾಳು ಮಕ್ಕಳ ಗಲಾಟೆಯಿಂದ ಎಲ್ಲಾ ಕೆಲಸ ಹಾಳು. ಹೊತ್ತು ಮೂಡಿ ಮಾರುದ್ದ ಮೇಲೆ ಬಂತು. ತುಳಸಿಗೆ ನೀರೆರೆದು ಪ್ರದಕ್ಷಿಣೆ ಮಾಡಿ ಬರುತ್ತೇನೆ. (ತೆರಳುವಳು.)

ಪದ್ಮಾವತಿ: ಮನೆಯಲ್ಲಿ ಸೌಖ್ಯವಿಲ್ಲದಿದ್ದರೆ ಒಂದಿಷ್ಟೂ ಮನಸ್ಸಿಗೆ ಸುಖವಿಲ್ಲ. ಜೀವನದಲ್ಲಿ ಶಾಂತಿಯಿಲ್ಲ. (ಒಳಗೆ ಹೋಗುವಳು.)

## ದೃಶ್ಯ ೨

(ಮನೆಯ ಜಗಲಿ. ಪದ್ಮಾವತಿ ಕಸಗುಡಿಸುತ್ತಿರುವಳು.)

ರಾಮು: (ಪ್ರವೇಶಿಸಿ) ಅಮ್ಮಾ, ಮಗು ಇನ್ನೂ ಏಳಲಿಲ್ಲವೆ?

ಪದ್ಮಾವತಿ: ಇಲ್ಲ ರಾಮು, ಜ್ವರ ಏರಿದೆ. ಮೈ ಕೆಂಡದಂತೆ ಕಾಯುತ್ತಿದೆ. ತಂದೆಯವರು ತಂತ್ರಿಗಳನ್ನು ಕರಕೊಂಡು ಬರಲಿಕ್ಕೆಂದು ಈಗ ತಾನೆ ಹೋದರು

ರಾಮು: ಅಯ್ಯೋ! ಇವರಿಗೆ ಹಿಡಿದುದು ಹುಚ್ಚು. ಆರೋಗ್ಯ ಕೆಟ್ಟು ಕಾಹಿಲೆ ಬಂದರೆ, ಭಸ್ಮ ಮಂತ್ರ ಎ ದದಿಂದ ಗುಣವಾಗುವುದೆಂಬುದು ಬರಿಯ ಭ್ರಾಂತಿ. ಈ ತಂತ್ರಿಗಳಂಥವರೇ ಭೂತಪ್ರೇತಗಳ ಭ್ರಾಂತಿ ಹುಟ್ಟಿ

ಸಿದವರು. ನಾಡಿನ ನರಭಕ್ಷಕರಲ್ಲಿ ಈ ಮಂತ್ರವಾದಿಗಳೂ ಒಬ್ಬರು. ಇಂಥ ಜನತಾದ್ರೋಹಿಗಳನ್ನು ಊರಿಂದೋಡಿಸಬೇಕು.

ಪದ್ಮಾವತಿ: ರಾಮು, ನೀನಂದುದು ನಿಜ. ಆದರೆ, ನಿನ್ನ ತಂದೆಯು ವರ ಮುಂದೆ ಹೀಗೇನಾದರೂ ಆಡಿದಿಯಾದರೆ ಅವರಿಗೆ ಸಿಟ್ಟು ಬಂದೀತು ನೋಡು.

ರಾಮು: ಅಮ್ಮಾ, ಆಡುವುದಲ್ಲ. ಆ ತಂತ್ರಿಗಳನ್ನು ಓಡಿಸುವುದು. ಅದರ ಮಾಯಮಂತ್ರವೆಲ್ಲ ನಮ್ಮೂರಲ್ಲಿ ನಡೆಯಲಾರದು ಇನ್ನು ಮುಂದೆ.

ಪದ್ಮಾವತಿ: ರಾಮು, ನಿನ್ನ ಅಜ್ಜಿ ಮತ್ತು ತಂದೆಯವರಿಗೆ ಹೇಳಿದರೆ ತಿಳಿಯುವುದಿಲ್ಲ. ಈಗ ತಂತ್ರಿಗಳನ್ನು ಕರೆದುಕೊಂಡು ಬಂದರೆ ಏನು ಮಾಡುವುದು?

ರಾಮು: ಅಮ್ಮಾ! ನೀವೇನೂ ಚಿಂತಿಸಬೇಡಿ. ತಂತ್ರಿಗಳು ಬಂದರೆ ಅವರನ್ನು ಓಡಿಸುವುದು ಮತ್ತೆ ಔಷಧಿ ಕುಡಿಸುವುದು. ಈಗ ಮೊದಲಿನಂತೆ ಔಷಧಿಗಾಗಿ ಪೇಟೆಗೆ ಹೋಗಬೇಕಾಗಿಲ್ಲ. ನಮ್ಮ ಗ್ರಾಮ ಚಿಕಿತ್ಸಾಲಯ ದಲ್ಲಿ ಉತ್ತಮ ಔಷಧಿ ದೊರೆಯುತ್ತದೆ. ಕಳೆದ ವಾರ ಡಾಕ್ಟರ್ ರಮೇಶ್ ಎಂಬವರು ಹೊಸತಾಗಿ ಬಂದಿದ್ದಾರೆ. ನಾನು ಮೊನ್ನೆ ಮೊನ್ನೆಯೇ ಯೋಚಿಸಿದ್ದೆ, ಡಾಕ್ಟರರ ಔಷಧಿ ತರುವುದೆಂದು. ಯಾವುದಕ್ಕೂ ನಮ್ಮ ಅಜ್ಜಿ ಕೇಳ ಬೇಕಲ್ಲ.

ಪದ್ಮಾವತಿ: ಆಗಲಿ ರಾಮು, ನೀನು ಈಗಲೇ ಹೋಗಿ ಡಾಕ್ಟರರನ್ನು ಕರೆತಾ.

ರಾಮು: ಅಮ್ಮಾ! ಡಾಕ್ಟರರನ್ನು ಕರೆತರುವ ಮೊದಲು ಒಮ್ಮೆಗೆ ಈ ತಂತ್ರಿಗಳ ಉಚ್ಚಾಟನ ಆಗಬೇಕು. ಅದಕ್ಕಾಗಿ ಡಾಕ್ಟರರಿಗೆ ಬರು ವಂತೆ ಹೇಳಿ, ನಮ್ಮ ಯುವಕ ಸಂಘದ ಕಾರ್ಯದರ್ಶಿ ಕರುಣಾಕರನನ್ನು ಕರೆದುಕೊಂಡು ಬರುತ್ತೇನೆ, ಈ ತಂತ್ರಿಗಳಿಗೆ ಬುದ್ಧಿ ಕಲಿಸಲಿಕ್ಕೆ ಮನುವಿಗೆ ಸ್ವಲ್ಪ ಬಾರ್ಲಿ ನೀರನ್ನು ಕೊಡಿ. (ಹೋಗುವನು.)

ಪದ್ಮಾವತಿ: ಊರೇ ಬದಲಾಗುತ್ತಿದ್ದರೂ ನನ್ನ ಅತ್ತೆಯು ಮತ್ತು ಆವರ ತಲೆ ಇನ್ನೂ ಬದಲಾಗಲಿಲ್ಲ. ದೇವರೇ! ಮನುವಿಗೆ ಸೌಖ್ಯವಾಗು ವಂತೆ ಮಾಡು. (ಕೈಮುಗಿದು ಪ್ರಾರ್ಥಿಸುವಳು.)

## ದೃಶ್ಯ ೩

(ರಂಗಣ್ಣನ ಮನೆ— ತಂತ್ರಿಗಳೊಡನೆ ರಂಗಣ್ಣನ ಪ್ರವೇಶ. ಇಬ್ಬರೂ ಮಂಚದ ಮೇಲೆ ಕುಳಿತುಕೊಳ್ಳುವರು.)

ರಂಗಣ್ಣ: ತಂತ್ರಿಗಳೇ, ಈಗಿನ ಕಾಲ ನೋಡಿ, ದೈವದೇವರು-ಮಂತ್ರವಾದ ಇದರಲ್ಲಿ ಜನರಿಗೆ ಶ್ರದ್ಧೆ-ವಿಶ್ವಾಸಗಳು ಕಡಿಮೆಯಾಗುತ್ತ ಬಂದಿವೆ. ಅದೇ ನೋಡಿ ಇಷ್ಟು ರೋಗರುಜೆಗಳು!

ತಂತ್ರಿಗಳು: ರಂಗಣ್ಣನೋರೆ, ನಿಜಕ್ಕೂ ನೀವು ಹೇಳಿದಿರಿ ನಮ್ಮೂರಲ್ಲಿ ನೀವಾದರೊಬ್ಬರಿದ್ದೀರಲ್ಲ ಆಸ್ತಿಕ ಮಹಾಶಯರು! ಆದ್ದರಿಂದ ನಮ್ಮೂರು ಇಷ್ಟಾದರೂ ಇರುವುದು.

ರಂಗಣ್ಣ: ಹಾಗೆ ಹೇಳಿ, ಇನ್ನೊಮ್ಮೆ ಹೇಳಿ. ನನ್ನ ಕಾಲ ಹೀಗೆ ನಡೆಯುತ್ತದೆ ಎನ್ನಿ. ಆದರೆ, ನನ್ನ ಮಕ್ಕಳ ಕಾಲ ಹೇಗಾಗುತ್ತದೋ? ಇದ್ದಾನಲ್ಲ ನಮ್ಮ ರಾಮು, ನಾಸ್ತಿಕ ಶಿಖಾಮಣಿ! ಅವನನ್ನು ಶಾಲೆಗೆ ಕಳಿಸಿ ಕಲಿಸಿದ್ದರಿಂದ ನನ್ನ ಮನೆಯೇ ಹಾಳಾಯಿತು. ಈಗಿನ ವಿದ್ಯೆಯೇ ಹಾಗೆ ನೋಡಿ. ಹ್ಞಾ, ಮಾತಾಡುವುದರಲ್ಲಿ ಬಾಯಾರಿಕೆ ಕೇಳಲು ಮರೆತೆ. ಕ್ಷಮಿಸಿ.

ತಂತ್ರಿಗಳು: ಅದೇನೂ ಬೇಕಾಗಿಲ್ಲ. ಇದ್ದರೆ ಒಂದು ಗಿಂಡಿ ಮಜ್ಜಿಗೆ ನೀರು ಕೊಡಿ. ಸ್ವಲ್ಪ ಉಪ್ಪು ಹಾಕಿ ಒಂದು ಗಾಂಧಾರಿ ಮೆಣಸು ನುರಿದು ಬಿಡಿ. ನಿಮ್ಮ ತಾಯಿಯ ಮಜ್ಜಿಗೆ ಅಂದರೆ ಅಷ್ಟು ರುಚಿ. ಎಲ್ಲಿದ್ದಾರೆ, ಗಂಗಕ್ಕ? ಕಾಣುವುದಿಲ್ಲ.

ರಂಗಣ್ಣ: ಸ್ನಾನ ಮುಗಿಸಿ ಅನುಷ್ಠಾನದಲ್ಲಿರಬೇಕು.

(ಒಳಗೆ ಹೋಗಿ ಒಂದು ಗಿಂಡಿಯಲ್ಲಿ ಮಜ್ಜಿಗೆ ನೀರು ತರುವನು.)

ತಂತ್ರಿಗಳು: (ಕುಡಿಯುತ್ತ) ಬಹಳ ಚೆನ್ನಾಗಿದೆ....ಇರಲಿ. ಈಗ ಹೊತ್ತು ಆಗುತ್ತ ಬಂತು. ಒಂದು ಬಲಿ ತೆಗೆಯಬೇಕು. ಭಸ್ಮದಲ್ಲಿ ಗುಣವಾಗುವುದಿದ್ರೆ ಬಲಿ ಬೇಡಾಂತ ಇದ್ದೆ. ಹುಡುಗನನ್ನು ಹೊರಗೆ ಮೆಲ್ಲಗೆ ಕರೆತನ್ನಿ.

ರಂಗಣ್ಣ: ಲೇ, ಮಗುವನ್ನು ಕರೆ ತಾ, ತಂತ್ರಿಗಳು ಬಂದಿದ್ದಾರೆ.

(ಪದ್ಮಾವತಿ ಮಗುವನ್ನು ಕರೆತರುವಳು.)

ತಂತ್ರಿಗಳು: (ಮೈಮುಟ್ಟಿ ನೋಡಿ) ಗಾಬರಿಯಿಲ್ಲ. ಏನೋ ಸೋಂಕಾದಂತೆ ಕಾಣುತ್ತದೆ ಅಷ್ಟೆ. ಒಂದು ಬಲಿ ತೆಗೆದರೆ ಎಲ್ಲಾ ಸಡ್ಡಾಗುತ್ತದೆ.

ಪದ್ಮಾವತಿ: (ಕಿವಿಗೆ ಕೈಮುಚ್ಚಿ ಸ್ವಗತ) ಎಂಥಾ ಅಪಶಬ್ದವಪ್ಪ!

ಗಂಗಜ್ಜಿ: (ಜಪಮಾಲೆ ಹಿಡಿದುಕೊಂಡು ಪ್ರವೇಶಿಸಿ) ತಂತ್ರಿಗಳೇ, ಬಂದಿರಾ? ನಾರಾಯಣ, ನಾರಾಯಣ! ಆಗಲೇ ಬಂದಿದ್ದೀರಾ? ಬಾಯಾರಿಕೆ ಎಲ್ಲಾ ಆಯ್ತೋ ಇಲ್ಲವೋ? ನಾನು ತುಳಸೀಪ್ರದಕ್ಷಿಣೆ ಮುಗಿಸಿ ನಿತ್ಯಾನುಷ್ಠಾನ ಮಾಡುತ್ತ ಇದ್ದೆ. ಉಂಟಲ್ಲ ನಮ್ಮದು.

ತಂತ್ರಿಗಳು: ಅಗತ್ಯ, ಅಗತ್ಯ. ರಂಗಣ್ಣ ಬರುವಾಗ ನಾನು ಏಂದು ಪೂಜೆಗೆ ಕುಳಿತಿದ್ದೆ. ಪೂಜೆ ಮುಗಿಸಿ ಬರುವಾಗ ಇಷ್ಟು ಹೊತ್ತಾಯ್ತು ನೋಡಿ. ಈಗ ಬಲಿ ಸಾಹಿತ್ಯ ಎಲ್ಲ ತಯಾರಿದೆಯೊ?

ಗಂಗಜ್ಜಿ: ನನಗೂ ಅಂದಾಜಿದೆ ಬಲಿ ತೆಗೆಯಬೇಕಾದೀತೆಂದು. ತೆಂಗಿನಕಾಯಿ ನಾಲ್ಕೆಂಟು ಸುಲಿದಿಟ್ಟದ್ದೇನೆ. ಅರಳು ತಯಾರಿಸಿದ್ದೇನೆ. ಕುರುದಿ ಮಾಡಿದರಾಯಿತು. ಕೋಲುತಿರಿ ಮಾಡಬೇಕಷ್ಟೆ. ಅದೂ ಈಗಲೇ ಆಗುತ್ತದೆ. ಇನ್ನೇನು?

ತಂತ್ರಿಗಳು: ಒಂದು ಹೊಸ ಬಟ್ಟೆ ಆಗಬೇಕು ಎಂಟು ಮೊಳದ್ದು — ಗ್ರಹಚಾರ ಶಾಂತಿಗಾಗಿ ಸುಳಿದು ತೆಗೆಯಲಿಕ್ಕೆ.

ಗಂಗಜ್ಜಿ: ರಂಗಣ್ಣ, ಧೋತರವೊಂದು ಮೊನ್ನೆ ಹಬ್ಬದ ಸಮಯ ತಂದದ್ದಿದೆಯಲ್ಲ? ಅದನ್ನೇ ಉಪಯೋಗಿಸಿದರಾಯಿತು. (ಪದ್ಮಾವತಿಯನ್ನು ಕರೆದು—)ಪದ್ದೂ, ಒಂದು ಹತ್ತು ಕೋಲು ತಿರಿ ಮಾಡು.

ಪದ್ಮಾವತಿ: ಕೋಲು ತಿರಿ ನನಗೆ ತಿಳಿಯದು. ಹಾಗೆಂದರೇನೆಂದೇ ನನಗರಿಯದು.

ಗಂಗಜ್ಜಿ: ನೋಡಿ ತಂತ್ರಿಗಳೇ! ಈಗಿನವರಿಗೆ ಮದ್ದಿನ ಬಾಟ್ಲಿ, ಪೌಡರ್ ಡಬ್ಬಿ ಮಾತ್ರ ಗೊತ್ತು. ಆಗಲಿ, ನಾನೇ ತಯಾರಿಸುತ್ತೇನೆ. (ಹೋಗುವಳು).

ತಂತ್ರಿಗಳು: ರಂಗಣ್ಣನೋರೆ, ಬಲಿ ಸಾಹಿತ್ಯ ಎಲ್ಲ ಬರಲಿ.

ರಂಗಣ್ಣ: ಆಗಲಿ, ತರುತ್ತೇನೆ. (ಒಳಗೆ ಹೋಗಿ ತೆಂಗಿನಕಾಯಿ ಕುರುದಿ, ಅರಳು ಇತ್ಯಾದಿ ತರುವನು.)

ಗಂಗಜ್ಜಿ: (ಪ್ರವೇಶಿಸಿ) ಕೋಲು ತಿರಿಯೂ ತಯಾರಾಯಿತು.

ಪದ್ದೂ, ಒಂದು ದೀಪ ತಂದು ಮೂಡು ಮೋರೆ ಮಾಡಿ ಇಡು. (ಪದ್ಮಾವತಿ ದೀಪ ತಂದಿಡುವಳು).

ತಂತ್ರಿಗಳು: ಬಟ್ಟೆ ಬಂದಿಲ್ಲವಲ್ಲ.

ರಂಗಣ್ಣ: ಮರೆತೇ ಹೋಯ್ತು, ತರುತ್ತೇನೆ (ಒಳಗೆ ಹೋಗಿ ತರುವನು).

ತಂತ್ರಿಗಳು: ಸರಿ, ಇನ್ನು ನಮ್ಮ ಕೆಲಸಕ್ಕೆ ಆರಂಭಿಸೋಣ.

ಗಂಗಜ್ಜಿ: (ಜಪಸರ ತಿರುಗಿಸುತ್ತಾ) ಬೇಗನೆ ಬಲಿ ಕೆಲಸ ಆಗಬೇಕು. ನಮ್ಮ ರಾಮು ಎಲ್ಲೋ ಹೊರಗೆ ಹೋಗಿದ್ದಾನೆ. ಅವನು ಬರುವ ಮೊದಲೇ ಮುಗಿದರೆ ಒಳ್ಳೆಯದಿತ್ತು.

ತಂತ್ರಿಗಳು: ಆಗಲಿ, ಹುಡುಗನನ್ನು ಹಿಡಿದುಕೊಂಡು ನೀವು ಮೂಡು ಮೋರೆ ಮಾಡಿ ಕುಳಿತುಕೊಳ್ಳಿ.

ರಂದಣ್ಣ: ಪದ್ಮಾ, ಇತ್ತ ಕರೆತಾ ಮಗುವನ್ನು. (ಪದ್ಮಾವತಿ ಕರೆದುತರುವಳು. ರಂಗಣ್ಣ ಮೂಡು ಮೋರೆ ಮಾಡಿ ಮಗುವನ್ನು ಹಿಡಿದುಕೊಂಡು ಕುಳಿತುಕೊಳ್ಳುವನು. ತಂತ್ರಿಗಳು ಧೋತರವನ್ನು ತಲೆಗೆ ಸುಳಿದು ತೆಗೆದು, ಕೋಲು ತಿರಿ ಹಚ್ಚಿ ಕುರುದಿ ಹಾರಿಸುವನು. ಬಳಿಕ ಹ್ರಾಂ ಹ್ರೀಂ ಹ್ರೂಂ ಎನ್ನುತ್ತ ತೆಂಗಿನಕಾಯಿಗಳನ್ನು ಸುಲಿದು ತೆಗೆಯುತ್ತ ಬಲಿ ಕೆಲಸ ಪೂರೈಸುವನು).

[ರಾಮು—ಕರುಣಾಕರರ ಪ್ರವೇಶ]

ರಾಮು: ತಂತ್ರಿಗಳೆ, ನಡಿರಿ ಇಲ್ಲಿಂದ! ನಿಮ್ಮಂಥವರಿಂದಲೇ ಊರು ಹಾಳಾದ್ದು! ಬಲಿ! ಬಲಿ ಮನುವಿಗಲ್ಲ. ಹಬ್ಬದ ಅವಲಕ್ಕಿ ತಿಂದು ಅಜೀರ್ಣವಾಗಿ ಮೈ ಬಿಸಿಯಾದ್ದಕ್ಕೆ ಬಲಿ! ಬಲಿ ನಿಮಗೆ ತೆಗೆಯುತ್ತೇನೆ! (ತೆಂಗಿನಕಾಯಿ ತೆಗೆದು ತಂತ್ರಿಗಳ ತಲೆಗೆ ಹೊಡೆಯಲು ಎತ್ತುವನು. ಎಲ್ಲರೂ ಕಕ್ಕಾಬಿಕ್ಕಿಯಾಗುವರು)

ರಂಗಣ್ಣ: ತಡಿಯೋ ರಾಮು! ನಿನಗೇನು ಹುಚ್ಚೋ?

ಗಂಗಜ್ಜಿ: ಏನೋ ರಾಮು ಹುಡುಗಾಟಿಕೆ? ಬಲಿಗೆ ಅಡ್ಡ ಬಂದರೆ ಏನಾದೀತು ಗೊತ್ತೊ? ನಾವೆಲ್ಲರೂ ಬಲಿಯಾಗಬೇಕಾದೀತು, ತಿಳಿಯಿತೋ?

ಕರುಣಾಕರ: ಅಜ್ಜಮ್ಮ, ನಿಮಗೆ ಹಿಡಿದಿದೆ ಮುದಿ ಭ್ರಾಂತಿ! ಈ ತಂತ್ರಿಗಳಂಥವರ ಮಾತು ಕೇಳಿದರೆ ನಿಜವಾಗಿಯೂ ನಾವು ಬಲಿಯಾಗ

ಬೇಕಾದೀತು ನಿಜ. (ತಂತ್ರಿಗಳ ಕಡೆಗೆ ನೋಡಿ) ತಂತ್ರಿಗಳೇ, ಸಾಕು ನಿಮ್ಮ ಬಲಿ! ಇನ್ನು ಮುಂದೆ ನಮ್ಮೂರಲ್ಲಿ ನಿಮ್ಮ ಬಲಿ, ಮಂತ್ರ, ಮಾಯ ನಡೆಸಿದರೆ ಜಾಗ್ರತೆ!

ತಂತ್ರಿಗಳು: ರಂಗಣ್ಣ ನೋಡಿ! ನೋಡಿ, ಈ ಹುಡುಗರ ಅನ್ಯಾಯ! ಇವರದೊಂದು ಸಂಘವಾಗಿ ಊರಲ್ಲಿ ನಮ್ಮಂಥ ಆಸ್ತಿಕರಿಗೆ ಸ್ಥಾನವೇ ಇಲ್ಲ ಇನ್ನು. ನಾನು ಹೋಗಿಬಿಡುತ್ತೇನೆ. (ಎದ್ದು ನಿಂತು ಧೋತ್ರ, ತೆಂಗಿನ ಕಾಯಿಗಳನ್ನು ಚೀಲಕ್ಕೆ ತುಂಬಿಸತೊಡಗುವರು)

ರಾಮು: (ತಂತ್ರಿಗಳನ್ನು ತಡೆದು) ಮುಟ್ಟಿದರೆ ಜಾಗ್ರತೆ! ಬಂದ ಹಾಗೆ ಬರಿಗೈಯಿಂದ ಹೋಗುತ್ತೀರೋ? ಅಲ್ಲ, ನಿಮಗೆ ಬಲಿ ತೆಗೆಯ ಬೇಕೋ? (ಕುರುನಿ ಪಾತ್ರವನ್ನು ಎತ್ತಿ ತಂತ್ರಿಗಳ ತಲೆ ಮೇಲೆ ಹೊಯ್ಯುವಾಗ ತಂತ್ರಿಗಳು ಓಡುವರು. ಬಳಿಕ ರಂಗಣ್ಣನ ಕಡೆಗೆ ನೋಡಿ) ಅಪ್ಪಾ, ಈ ತಂತ್ರಿಗಳು ವಂಚಕರು. ಇವರ ಮಾತಿಗೆ ನೀವೂ ಮರುಳಾಗಿರುವಿರಲ್ಲ! ನನಗಿದೆಲ್ಲ ಗೊತ್ತು. ಮೊದಲೇ ಗೊತ್ತು. ಈ ತಂತ್ರಿಗಳಿಗೆ ಬುದ್ಧಿ ಕಲಿಸ ಬೇಕೆಂದು ಸುಮ್ಮನಿದ್ದೆ.

ರಂಗಣ್ಣ: ರಾಮು, ನನಗೂ ತಂತ್ರಿಗಳನ್ನು ಕರೆತರಲು ಪೂರ್ತಿ ಮನಸ್ಸಿರಲಿಲ್ಲ. ನಿನ್ನ ಅಜ್ಜಿಗಾಗಿ ಕರೆತಂದದ್ದು. ನಮಗೆ ಒಟ್ಟಾರೆ ಸೌಖ್ಯವಾಗಬೇಕಷ್ಟೆ.

ಕರುಣಾಕರ: ನಾವು ಬರುವಾಗಲೆ ಡಾಕ್ಟರನ್ನು ಬರುವಂತೆ ಹೇಳಿ ಬಂದಿದ್ದೇವೆ (ರಿಸ್ಟ್‌ವಾಚು ನೋಡಿ) ಏನು ಬಂದಿಲ್ಲ? ಅರ್ಧ ಗಂಟೆಯೊಳಗೆ ಬರುತ್ತೇನೆಂದಿದ್ದರಲ್ಲ!

ರಾಮು: ಬಂದಾರು. ಈಗ ನಾವು ಬಂದು ಅರ್ಧ ಗಂಟೆಯಾಗಿಲ್ಲ. ನಾವು ಬೇಗನೆ ಬಂದ ಕಾರಣ ಈ ತಂತ್ರಿಗಳ ಉಚ್ಚಾಟನೆಯಾಯಿತು. ಈಗ ಸ್ವಲ್ಪ ಕಾಫಿ ಕುಡಿಯೋಣ. ಏಳು, ಒಳಗೆ ಹೋಗುವ.

ರಂಗಣ್ಣ: ಕರುಣಾಕರ, ಏಳು, ಸ್ವಲ್ಪ ಬಾಯಾರಿಕೆ ತೆಗೊಳ್ಳೋಣ. (ಎಲ್ಲರೂ ಏಳುವರು)

ಗಂಗಜ್ಜಿ: ರಂಗಣ್ಣ, ಈ ಹುಡುಗರ ಮಾತು ಕೇಳಿ ನಿನ್ನ ತಲೆಯೂ ತಿರುಗಿತೇ! ನಾರಾಯಣ, ನಾರಾಯಣ, (ಜಪಮಾಲೆ ತಿರುಗಿಸುತ್ತಾ ಒಳಗೆ ಹೋಗುವಳು)

## ದೃಶ್ಯ ೪

[ಚಾವಡಿ. ರಂಗಣ್ಣ, ರಾಮು, ಕರುಣಾಕರ ಇವರು ಡಾಕ್ಟರರ ಹಾದಿ ನೋಡುತ್ತಿರುವಾಗ ಡಾಕ್ಟರರ ಪ್ರವೇಶ.]

ರಾಮು: ಬನ್ನಿ ಡಾಕ್ಟ್ರೇ. ನಮಸ್ಕಾರ! ಕುಳಿತುಕೊಳ್ಳಿ. (ಬೇಗನ್ನು ಕೈಯಿಂದ ತೆಕ್ಕೊಂಡು ಕುರ್ಚಿ ತೋರಿಸುವನು).

ಡಾಕ್ಟರ್: ನಮಸ್ಕಾರ. (ಕುಳಿತುಕೊಳ್ಳುವರು).

ಕರುಣಾಕರ: ನಮಸ್ಕಾರ. ಏನು ಸ್ವಲ್ಪ ತಡವಾಯಿತು!

ಡಾಕ್ಟರ್: ಹೊರಡುವಾಗ ಒಬ್ಬ ಪೇಶಂಟ್ ಬಂದ. ಅವನನ್ನು ಕಳುಹಿಸಿ ಬರುವಾಗ ಒಂದು ಹತ್ತು ಮಿನಿಟು ಲೇಟಾಯಿತು ಅಷ್ಟೆ. ನನ್ನ ಸೈಕಲ್ ಹೊರಗಿಟ್ಟಿದ್ದೇನೆ ತೊಂದರೆಯಾಗದಷ್ಟೆ?

ರಾಮು: ಏನೂ ತೊಂದರೆಯಾಗದು (ತಾಯಿಯನ್ನು ಕರೆದು) ಅಮ್ಮಾ, ಡಾಕ್ಟರ್ ಬಂದರು ಬಾಯಾರಿಕೆ [illegible] ಅಮ್ಮಾ. (ಪದ್ಮಾವತಿ ಕಾಫಿ ತರುವಳು)

ಡಾಕ್ಟರ್: (ತೆಗೆದುಕೊಳ್ಳುತ್ತ, ರಂಗಣ್ಣನ ಕಡೆಗೆ ನೋಡಿ) ಇವರೇ ಏನು ನಿಮ್ಮ....

ರಾಮು: ಹೌದು, ಇವರೇ ನನ್ನ ತಂದೆಯವರು

ರಂಗಣ್ಣ: ನಮಸ್ಕಾರ. (ಕೈಮುಗಿಯುವನು).

ಡಾಕ್ಟರ್: ನಮಸ್ಕಾರ, ನೋಡಿ ಸ್ವಾಮಿ, ನಮ್ಮ ಹಳ್ಳಿಯವರ ಕಣ್ಣು ಇನ್ನೂ ಪೂರ್ತಿ ತೆರೆದಿಲ್ಲ. ಇನ್ನೂ ಅಂಧಾಚಾರ ಬಿಟ್ಟಿಲ್ಲ. ರೋಗ ರುಜೆಗಳು ಬರುವುದು ಅನಾರೋಗ್ಯದಿಂದಲ್ಲದೆ ಭೂತಪ್ರೇತಗಳ ಬಾಧೆಯಿಂದಲ್ಲವೆಂಬುದು ಇನ್ನೂ ಅವರ ಕುಂಬು ತಲೆಯೊಳಗೆ ಹೊಕ್ಕಿಲ್ಲ. ನೋಡಿ, ರೋಗ ಬಾರದಂತೆ ನಾವು ಜಾಗ್ರತೆಯಾಗಿರಬೇಕು. ಮಕ್ಕಳಿಗೆ ಆಹಾರ ವ್ಯತ್ಯಾಸದಿಂದ ಏನಾದರೂ ಕಾಹಿಲೆ ಬರುತ್ತೆ. ಬಂದರೆ ಅದಕ್ಕೇನಾದರೂ ಔಷಧಿ ಕೊಟ್ಟರೆ ಥಕ್ಕನೆ ಗುಣವಾಗುತ್ತದೆ

ರಂಗಣ್ಣ: ಹೌದದು

ಡಾಕ್ಟರ್: ಈಗ ಹೇಗಿದೆ ಹುಡುಗನಿಗೆ?

ರಾಮು: ವಿಶೇಷವಿಲ್ಲ ವಿಶೇಷವಾಗುತ್ತಿತ್ತು — ನಾವು ಬರುವದು ತಡವಾಗುತ್ತಿದ್ದರೆ....

ಡಾಕ್ಟರ್: ಅಂದರೆ—

ಕರುಣಾಕರ: ಏನಿಲ್ಲ, ನಮ್ಮ ಈ ಊರಿನಲ್ಲಿ ತಂತ್ರಿಗಳು ಅಂತ ಒಂದು ಆಸಾಮಿ ಇದೆ. ಮಂತ್ರ, ತಂತ್ರ, ಮಾಯ, ಮಾಟ ಎಂದು ಸುಲಿಗೆ ಮಾಡಿ ಜನರನ್ನು ವಂಚಿಸುವ ಕದೀಮ. ಆ ತಂತ್ರಿಗಳ ಸವಾರಿಯಾಗಿತ್ತು ನಾವು ಬರುವಾಗ.

ಡಾಕ್ಟರ್: ಮತ್ತೆ.

ರಾಮು: ಮತ್ತೇನು? ನಾವು ಆ ಆಸಾಮಿಯನ್ನು ಹೊಡೆದು ಓಡಿಸಿದೆವು. ಇನ್ನು ಮುಂದೆ ಅವರ ಆಟ ನಡೆಯದಂತೆ ಮಾಡಿಬಿಟ್ಟೆವು.

ಡಾಕ್ಟರ್: ಚೆನ್ನಾಯಿತು. (ರಂಗಣ್ಣನನ್ನು ನೋಡಿ) ನೋಡಿ ಸ್ವಾಮಿ, ನಿಮ್ಮ ಮಂತ್ರ ತಂತ್ರಕ್ಕೆಲ್ಲ ಈಗಿನ ಕಾಹಿಲೆಗಳು ಬಗ್ಗುವ ಹಾಗಿಲ್ಲ— ನೀವೂ ಈ ಮಂತ್ರ ತಂತ್ರಗಳಿಗೆ ಮರುಳಾದಿರಾ?

ರಂಗಣ್ಣ: ಡಾಕ್ಟ್ರೇ, ನನ್ನ ಅಮ್ಮನವರ ಒತ್ತಾಯಕ್ಕೆ ತಂತ್ರಿಗಳನ್ನು ಕರೆತಂದೆ. ಅಂತೂ ಈಗ ಹುಡುಗನಿಗೆ ಗುಣವಾದರೆ ಸಾಕು. ಅಷ್ಟೆ.

ರಾಮು: ಅಮ್ಮಾ, ಮನುವನ್ನು ಕರೆ ತಾ ಅಮ್ಮಾ, (ಪದ್ಮಾವತಿ ಮನುವನ್ನು ಕರೆತರುವಳು. ಡಾಕ್ಟರರು ಪರೀಕ್ಷಿಸುವರು).

ಗಂಗಜ್ಜಿ: (ಪ್ರವೇಶಿಸಿ) ನಾರಾಯಣ, ನಾರಾಯಣ, ಇವರು ಯಾರು ರಾಮು? ದಾಕ್ತ್ರರೆಂದರೆ ಇವರೇ ಏನು? ಹೋಯಿತು, ಎಲ್ಲ ಹೋಯಿತು! ಕಾಲಿನ ಪಾಪಾಸು ತೆಗೆಯದೆ ಒಳಗೆ ಬಂದಿದ್ದಾನೆ ಈತ. ಮಡಿ ಮೈಲಿಗೆ ಒಂದೂ ಇಲ್ಲ. ಎಂಜಲೆಂಬುದು ಹೋದ ದಾರಿಯಲ್ಲಿಲ್ಲ. ಅಲ್ಲ, ಯಾರ್ಯಾರ ಬಾಯಿಗಿಟ್ಟ ಎಂಜಲು ಕಡ್ಡಿಯನ್ನು ಮನುವಿನ ಬಾಯಿಗೆ ತುರುಕುತ್ತಾನಲ್ಲ! ಇಂಥ ಅನಾಚಾರದಿಂದಲೇ ರೋಗರುಜಿ ಎಲ್ಲಾ ಬರುವುದು.

ಡಾಕ್ಟರ್: ಅಜ್ಜಿ, ಸ್ವಲ್ಪ ತಡೆಯಿರಿ. ನಿಮ್ಮ ಅಂಧಶ್ರದ್ಧೆಯನ್ನು ಬಿಡಿ. ಇದು ಎಂಜಲು ಕಡ್ಡಿಯಲ್ಲ. ಜ್ವರ ಪರೀಕ್ಷೆ ಮಾಡುವ ಉಪಕರಣ ನೀವು ನಾರಾಯಣ ನಾರಾಯಣ ಎಂದು ನಿಮ್ಮ ಜಪಮಾಡುತ್ತಿರಿ ಸುಮ್ಮನಿರಿ.

ರಾಮು: ಅಜ್ಜಿ, ನೀವು ಒಳಗೆ ಹೋಗಿ ಜಪಮಾಡಿ.

ಗಂಗಜ್ಜಿ: ಆಗಲಿ, ಮನುವಿಗೆ ಇವರು ಗುಣ ಮಾಡುತ್ತಾರೋ? ಗುಣವಾದರೆ ಸಾಕು. ನಾರಾಯಣ ನಾರಾಯಣ (ಒಳಗೆ ಹೋಗುವಳು).

ಪದ್ಮಾವತಿ: ಡಾಕ್ಟರರೇ, ಮಗುವಿಗೆ ಬೇಗ ಗುಣವಾಗಬಹುದೇ?

ಡಾಕ್ಟರ್: ಅಮ್ಮಾ, ನೀವು ಹೆದರಬೇಡಿ. ನಿಮ್ಮ ತಂತ್ರಿಗಳ ಬಲಿಯನ್ನು ನಂಬಿದ್ದರೆ ತೊಂದರೆಯಾಗುತ್ತಿತ್ತು. ಈಗ ನೀವೇನೂ ಹೆದರಬೇಕಾಗಿಲ್ಲ. ನಾನೀಗ ಹೋಗಿ ನಿಮ್ಮ ರಾಮುವಿನೊಡನೆ ಮದ್ದು ಕಳಿಸುತ್ತೇನೆ. ಒಂದೇ ದಿನದಲ್ಲಿ ಜ್ವರ ಕೆಳಗಿಳಿಯುವುದು.

ಕರುಣಾಕರ: ಡಾಕ್ಟರರೇ, ನಮ್ಮೂರೆಂಬುದು ನೋಡಿ, ಈಗಲಾದರೂ ಇಷ್ಟರ ಮಟ್ಟಿಗಿದೆ. ಎರಡು ಮೂರು ವರ್ಷಗಳ ಮೊದಲು ಬರೇ ಒಂದು ಹಳ್ಳಿಕೊಂಪೆಯಾಗಿತ್ತು. ಇಲ್ಲಿಯ ಜನರಲ್ಲಿ ಹೆಚ್ಚಿನವರು ಅವಿದ್ಯಾವಂತರು, ಬಡವರು, ಅಂಧಶ್ರದ್ಧೆಯವರು. ಇಂಥವರು ನೋಡಿ ತಂತ್ರಿಗಳಂಥ ವಂಚಕರ ಮಂತ್ರ-ತಂತ್ರ-ಬಲಿ-ಬಲ್ಮೆಗಳಿಗೆ ಬಲಿಯಾಗುತ್ತಿದ್ದರು.

ರಾಮು: ಇನ್ನೂ ನಮ್ಮೂರ ಕತೆ ನಿಮಗೆ ತಿಳಿದಿಲ್ಲ. ಇಲ್ಲಿ ಕೆಲವರು ನರಭಕ್ಷಕರು ಇದ್ದಾರೆ. ಬಡವರಿಗೆ ಸಾಲಕೊಟ್ಟು ಒಂದಕ್ಕೆ ನಾಲ್ಕು ಬಡ್ಡಿ ವಸೂಲು ಮಾಡುವವರು. ಕೊಡಲು ಕಾಸಿಲ್ಲದವರಿಂದ ಅವರ ಹೆಂಡಿರ ಕರಿಮಣಿ ಮೂಗುತಿ ಕಳಚಿಕೊಡೆಂದು ಹೇಳಿ ಅವರ ಪ್ರಾಣಹಿಂಡಲೂ ಹೇಸದವರು.

ರಂಗಣ್ಣ: ಹೌದು ಡಾಕ್ಟ್ರೇ, ನಮ್ಮೂರು ಬಹಳ ಹಾಳೂರು.

ಡಾಕ್ಟರ್: ಕರುಣಾಕರ್, ನೀವೇನಾದರೂ ನಿಮ್ಮೂರ ಉದ್ಧಾರಕ್ಕೆ ಕೆಲಸ ಕೈಕೊಳ್ಳಬಾರದೇಕೆ?

ಕರುಣಾಕರ: ಈಗಾಗಲೆ ಒಂದು ಸಹಕಾರಿ ಬೇಂಕ್ ತೆರೆದು ಬಡ ರೈತರಿಗೆ ಕಡಿಮೆ ಬಡ್ಡಿಗೆ ಸಾಲಕೊಡುವ ವ್ಯವಸ್ಥೆಮಾಡಲಾಗಿದೆ. ಅವಿದ್ಯೆಯ ನಿವಾರಣೆಗಾಗಿ ಒಂದು ರಾತ್ರಿಶಾಲೆ, ಒಂದು ವಾಚನಾಲಯ ಒಂದು ಅಂಚೆ ಕಟ್ಟೆ ಇಷ್ಟೆಲ್ಲಾ ನಮ್ಮ ಯುವಕ ಸಂಘವು ಸಾಧಿಸಿದೆ.

ಡಾಕ್ಟರ್: ನಿಮ್ಮ ಸಾಹಸ ನಿಜಕ್ಕೂ ಸ್ತುತ್ಯವಾದುದು.

ರಾಮು: ಈ ಗ್ರಾಮಚಿಕಿತ್ಸಾಲಯ ಕೂಡ ಪ್ರಾರಂಭವಾಗಿ ನಾಲ್ಕು ತಿಂಗಳಾಯಿತಷ್ಟೆ. ಇದರಿಂದಲಾಗಿ ನಮ್ಮೂರ ತಂತ್ರಿಗಳಂಥ ನರಭಕ್ಷಕರ ವ್ಯಾಪಾರ ಸ್ವಲ್ಪ ಕಡಿಮೆಯಾಗಿದೆ; ಬಡವರು ಬದುಕುವಂತಾಗಿದೆ.

ಡಾಕ್ಟರ್: ರಂಗಣ್ಣನವರೇ, ಈಗ ಹಳ್ಳಿಗಳ ಉದ್ಧಾರಕ್ಕಾಗಿ ಸರಕಾರವು ಬಹಳ ಹಣ ವ್ಯಯಮಾಡುತ್ತಿರುವಾಗ ಅದರ ಉಪಯೋಗವನ್ನು ಪಡೆದು ಹಳ್ಳಿಗಳಲ್ಲಿ ಬೇರುಬಿಟ್ಟಿರುವ ಅವಿದ್ಯೆ, ಅಜ್ಞಾನ, ಅನಾರೋಗ್ಯ, ಬಡತನ ಇತ್ಯಾದಿ ಕೊರತೆಗಳನ್ನು ನೀಗಿಸಲು ಇರುವಂಥವರು ಪ್ರಯತ್ನಿಸ-

ವಾಗ ನಿಮ್ಮಂಥ ಹಿರಿಯರು ಅವರಿಗೆ ಪ್ರೋತ್ಸಾಹ ನೀಡಬೇಕು. ಇಂಥ ತರುಣ ಕಾರ್ಯಕರ್ತರಿಂದಲೇ ಹಳ್ಳಿಗಳಲ್ಲಿ ಜ್ಞಾನ, ವಿದ್ಯೆ, ಆರೋಗ್ಯ ನೆಲೆಯಾಗುವುದರ ಮೂಲಕ 'ನವಜೀವನ' ಆರಂಭವಾಗಿ ಸುಖ-ಶಾಂತಿ-ಸುಭಿಕ್ಷಗಳು ನೆಲಸುವುವು.

ರಂಗಣ್ಣ: ಡಾಕ್ಟ್ರೇ, ನಿಮ್ಮ ಮಾತು ನಿಜ. ನಿಮ್ಮ ಉಪಕಾರವನ್ನು ಸ್ಮರಿಸುವಂತಿಲ್ಲ.

ಡಾಕ್ಟರ್: ರಂಗಣ್ಣನವರೇ, ಇಂತಹ ವಿದ್ಯಾವಂತ ತರುಣರಿಂದಲೇ ನಾಡಿನ ನವಜೀವನ.

(ಪದ್ಮಾವತಿ ಕಾಫಿ ತಿಂಡಿ ತಂದು ಮೇಜಿನ ಮೇಲಿಡುವಳು.)

ರಾಮು: ಡಾಕ್ಟರರೇ, ತೆಗೆದುಕೊಳ್ಳೋಣ

ಕರುಣಾಕರ: ಹೇಗೆ ಇಂದಿನ ತಂತ್ರಿಗಳ ಬಲಿ?

ರಾಮು: ಈ ತಂತ್ರಿಗಳು ಸಾಯುವ ತನಕ ಇಂಥ ಕೆಲಸಮಾಡಲಾರರು—ಅಷ್ಟಾಯಿತು ಇಂದು.

ಡಾಕ್ಟರ್: ನಾನೀಗ ಹೊರಡುತ್ತೇನೆ. ನಾಳೆ ಚಿಕಿತ್ಸಾಲಯದ ಕಡೆಗೆ ಬಂದುಬಿಡಿ. ಮಗುವಿಗೆ ಇಂದೇ ಜ್ವರ ಕಡಿಮೆಯಾದೀತು, ಏನೂ ಹೆದರಿಕೆ ಇಲ್ಲ. ರಾಮು, ಕರುಣಾಕರ್, ನಿಮ್ಮ ಸೇವಾವೃತ್ತಿಯನ್ನು ತಿಳಿದು ತುಂಬ ಸಂತೋಷಪಟ್ಟೆ.

(ರಾಮು ಡಾಕ್ಟರರಿಗೆ ಹತ್ತು ರೂಪಾಯಿ ನೋಟೊಂದನ್ನು ಕೊಡಲು ಹೋಗುವರು. ಡಾಕ್ಟರರು ತೆಗೆದುಕೊಳ್ಳದೆ) ಇದೆಲ್ಲ ಅಗತ್ಯವಿಲ್ಲ.

ರಂಗಣ್ಣ: ಹಾಗಲ್ಲ, ನಮ್ಮದೊಂದು ಉಪಕಾರಸ್ಮರಣೆ ಅಷ್ಟೆ.

ಡಾಕ್ಟರ್: ನೋಡಿ, ನನಗೆ ಸರಕಾರದಿಂದ ಸಂಬಳ ಸಿಗುವಾಗ ನಿಮ್ಮಿಂದ ಹಣ ತೆಕ್ಕೊಳ್ಳುವುದೇ? ಸರ್ವಥಾ ಸಾಧ್ಯವಿಲ್ಲ.

ರಾಮು: ಡಾಕ್ಟರರೇ! ತುಂಬ ಉಪಕಾರ! ನಿಮ್ಮಂಥವರಿಂದ ನಾಡಿನ 'ನವಜೀವನ'ವಾಗಬೇಕು.

ಡಾಕ್ಟರ್: ಅದಕ್ಕೆ ನಿಮ್ಮಂಥವರ ಸೇವಾ-ಸಹಕಾರಗಳೂ ಬೇಕು. ಬರುತ್ತೇನೆ—ನಮಸ್ಕಾರ!

ಎಲ್ಲರು: ನಮಸ್ಕಾರ!

[ಸಮಾಪ್ತಿ]

ಈ ನಾಟಕವನ್ನು ನವಂಬರ್ 14—ಮಕ್ಕಳ ದಿನಾಚರಣೆಯ ಸಂದರ್ಭದಲ್ಲಿ ಅಭಿನಯಿಸುವಂತೆ ರಚಿಸಲಾಗಿದೆ. ಬೇರೆ ಸಂದರ್ಭದಲ್ಲಿ ದೃಶ್ಯ ೧ರಲ್ಲಿ ಬರುವ "ಮಕ್ಕಳ ದಿನಾಚರಣೆ' ಎಂಬ ಮಾತನ್ನು ಬದಲಾಯಿಸಿಕೊಳ್ಳಬಹುದು.]

Edited, Printed & Published by K. V. Shenoy
at The Prabhat Printers Ltd., Mangalore.